**ದಿನಾಂಕಃ 15.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

## ಮುಂದುವರಿದ ಪಾಟೀಸವಾಲುಃ 4 ನೇ ಪ್ರತಿವಾದಿಪರ ವಕೀಲರಾದ ಶ್ರೀಮತಿ ಎಸ್.ಟಿ.ಯು ಅವರಿಂದ –

**12.** ನನ್ನ ತಾತನಿಗೆ ಪಿತ್ರಾರ್ಜಿತವಾಗಿ **6** ಎಕರೆಗಿಂತ ಹೆಚ್ಚು ಜಮೀನು ಬಂದಿತ್ತು. ಅವುಗಳೆಂದರೆ ಸರ್ವೇ ನಂ. **23** ರಲ್ಲಿ **3** ಎಕರೆ **16** ಗುಂಟೆ ಹಾಗೂ ಸರ್ವೇ ನಂ.**15** ರಲ್ಲಿ **34** ಗುಂಟೆ, ಸರ್ವೇ ನಂ.**14** ರಲ್ಲಿ **1** ಎಕರೆ **14** ಗುಂಟೆ, ಇಷ್ಟು ಮಾತ್ರ ನನಗೆ ನೆನಪಿದೆ. ಈ ಕೇಸಿನ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ದಾವೆ ಹಾಕುವಾಗ ನಮ್ಮ ತಂದೆ ಭಾಗಕ್ಕೆ ಮೌಖಿಕ ವಿಭಾಗದ ಆಧಾರದ ಮೇಲೆ ಎಷ್ಟು ಆಸ್ತಿಗಳು ಬಂದಿವೆ ಎಂದು ನನಗೆ ತಿಳಿದಿರಲಿಲ್ಲ.

**13.** ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವಾಗ ಕೂಡ ನಮ್ಮ ತಂದೆ ಭಾಗಕ್ಕೆ ಎಷ್ಟೆಷ್ಟು ಆಸ್ತಿಗಳು ಬಂದಿದ್ದವು ನಾನು ತಿಳಿದುಕೊಂಡಿರಲಿಲ್ಲ. ನಮ್ಮ ತಂದೆ–ತಾಯಿ ನಮ್ಮ ಊರಿನಲ್ಲಿರುವ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ. ನಾನು ಕೆಲಸದ ನಿಮಿತ್ತ ಮೈಸೂರಿನಲ್ಲಿ ವಾಸ ಮಾಡುತ್ತಿದ್ದೇನೆ. ನಮ್ಮ ಅಜ್ಜಿ ತಾತನ ಮನೆಯಲ್ಲಿ ನನ್ನ ಅಜ್ಜಿ ವಾಸವಾಗಿದ್ದಾರೆ.

**14.** ಈಗ ನನಗೆ ತೋರಿಸುತ್ತಿರುವ ಛಾಯಚಿತ್ರದಲ್ಲಿ ಕಾಣುತ್ತಿರುವ ಮನೆಯಲ್ಲಿ ನನ್ನ ತಂದೆ–ತಾಯಿ ವಾಸವಾಗಿದ್ದಾರೆ. ಇದು ನನ್ನ ತಂದೆ–ತಾಯಿಯ ಭಾಗಕ್ಕೆ ಬಂದಂತಹ ಜಾಗದಲ್ಲಿ ನನ್ನ ತಂದೆ–ತಾಯಿ ಕಟ್ಟಿದ್ದಾರೆ ಎಂದರೆ ಸರಿಯಲ್ಲ, ಇದು ನನ್ನ ತಾತನಿಂದಲೆ ಬಂದಿರುತ್ತದೆ. ಸದರಿ ಭಾವಚಿತ್ರವನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿ ಕಾಣುತ್ತಿರುವ ಮನೆಯನ್ನು ಕಟ್ಟಿಸಿ ಅಂದಾಜು 8 ವರ್ಷಗಳಾಗಿವೆ.

**15.** ಸರ್ವೇ ನಂ.**23** ರಲ್ಲಿ **2** ಮತ್ತು **3** ನೇ ಪ್ರತಿವಾದಿಗಳಾದ ತಿಮ್ಮಪ್ಪ ಮತ್ತು ಸವಿತ ಅವರ ಮನೆಯಿದೆ ಎಂದರೆ ಸರಿ. **2** ಮತ್ತು **3** ನೇ ಪ್ರತಿವಾದಿಗಳು ನನ್ನ ಚಿಕ್ಕಪ್ಪ ಹಾಗೂ

ಚಿಕ್ಕಮ್ಮ ಎಂದರೆ ಸರಿ. 2 ನೇ ಪ್ರತಿವಾದಿ ಮಧ್ಯವ್ಯಸನಿಯಾಗಿದ್ದಾರೆ ಎಂದರೆ ಸರಿ. ದಾವ ಐಟಂ ನಂ.1 ಮೂಲ ಸರ್ವೇ ನಂ.23 ರಲ್ಲಿ ಒಟ್ಟು 3 ಎಕರೆ 7 ಗುಂಟೆ ಜಮೀನಿದೆ ಎಂದರೆ ಸರಿ. ಸದರಿ ಸ್ವತ್ತು ಸರ್ವೇ ನಂ.23/1 ಹಾಗೂ 23/2 ಆಗಿದೆ ಎಂದರೆ ಸರಿ. ದಾವ ಐಟಂ ನಂ.1 ನನ್ನ ತಾತ ಹೊನ್ನಪ್ಪ ಅವರ ಹೆಸರಿನಲ್ಲಿದೆ ಎಂದರೆ ಸರಿ. ಸರ್ವೇ ನಂ. 23/2, 2 ಮತ್ತು 3 ನೇ ಪ್ರತಿವಾದಿಗಳ ಹೆಸರಿನಲ್ಲಿದೆ ಎಂದರೆ ಸರಿ. ಸರ್ವೇ ನಂ.23/2 ರಲ್ಲಿ 20 ಗುಂಟೆ ಜಮೀನು 4 ನೇ ಪ್ರತಿವಾದಿ ಹೆಸರಿನಲ್ಲಿದೆ ಎಂದರೆ ಅದು ನನಗೆ ಗೊತ್ತಿಲ್ಲ.

16. 4 ನೇ ಪ್ರತಿವಾದಿ ಸವಿತ ಕೋಂ ಕೃಷ್ಣೇಗೌಡ ಅವರ ಹೆಸರಿನಲ್ಲಿ ದಾವ 3 ನೇ ಐಟಂ ಸ್ವತ್ತಿನ ಖಾತೆ ಇದ್ದ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಅವರನ್ನು ಈ ದಾವೆಯಲ್ಲಿ ಏಕೆ ಪಕ್ಷಗಾರನಾಗಿ ಮಾಡಿದ್ದೇನೆ ಎಂದರೆ ನನ್ನ ತಾತನ ಹೆಸರಿನಿಂದ ಅವರ ಹೆಸರಿಗೆ ಖಾತೆ ಹೋಗಿರುವುದರಿಂದ ಅವರನ್ನು ಪಕ್ಷಗಾರನಾಗಿ ಮಾಡಿದ್ದೇನೆ. ಈ ರೀತಿ ವಿನಃ ಕಾರಣ 4 ನೇ ಪ್ರತಿವಾದಿಗೆ ಖಾತೆ ಹೋಗಿರುವ ಸಂಬಂಧ ಸಂಬಂಧಪಟ್ಟ ರೆವೆನ್ಯೂ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೆ.

17. ದಿಃ 22.10.2018 ರಂದು 2 ಮತ್ತು 3 ನೇ ಪ್ರತಿವಾದಿಗಳು ದಾವ 3 ನೇ ಐಟಂ ಸ್ವತ್ತನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಯಾವಾಗ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರು ಈ ರೀತಿ ಕ್ರಯಕ್ಕೆ ಕೊಂಡ ನಂತರ ಅವರ ಹೆಸರಿಗೆ ಪ್ರತ್ಯೇಕ ಖಾತೆ ಆಗಿದೆ ಸದರಿ ಸ್ವತ್ತಿನಲ್ಲಿ ಅವರು ಬೋರ್ ವೆಲ್ ಹಾಕಿಸಿ ಪ್ರತ್ಯೇಕ ವಿದ್ದುಚ್ಚಕ್ತಿ ಸಂಪರ್ಕ ಪಡೆದಿದ್ದಾರೆ ನನಗೆ ಗೊತ್ತಿಲ್ಲ, ನಾನು ಅವುಗಳನ್ನುನಾನು ನೋಡಿಲ್ಲ.

18. ಸರ್ವೇ ನಂ.15/1 ರಲ್ಲಿ 34 ಗುಂಟೆ ಸ್ವತ್ತು ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಈ ಸ್ವತ್ತನ್ನು ನನ್ನ ತಾಯಿಯಾದ 5 ನೇ ಪ್ರತಿವಾದಿಗೆ ನನ್ನ ತಾತ ದಾನಪತ್ರದ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ10.01.2018 ರಂದು ಸದರಿ ದಾನಪತ್ರ ನೊಂದಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಅವರ ಹೆಸರಿಗೆ ಖಾತೆ ಕೂಡ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

19. ದಾವ 5 ನೇ ಐಟಂ ಸ್ವತ್ತಾದ ಸರ್ವೇ ನಂ.15/2 ರಲ್ಲಿ 1 ಎಕರೆ ಸ್ವತ್ತು 2 ಮತ್ತು 3 ನೇ ಪ್ರತಿವಾದಿಗಳಿಗೆ ನನ್ನ ತಾತ ದಾನಪತ್ರದ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ16.02.2016 ರಂದು ಸದರಿ ದಾನಪತ್ರ ನೊಂದಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ 2 ಮತ್ತು 3 ನೇ ಪ್ರತಿವಾದಿಗಳ ಹೆಸರಿಗೆ ಖಾತೆ ಕೂಡ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತುಗಳನ್ನೆಲ್ಲಾ ನನ್ನ ತಾತ ವ್ಯವಸ್ಥಿತವಾಗಿ ಹಂಚಿಕೆ ಮಾಡಿ ಆ ಪ್ರಕಾರ ಎಲ್ಲಾ ದಾನಪತ್ರಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ.

20. ನಮ್ಮ ತಂದೆ-ತಾಯಿ ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ ಎಂದರೆ ಸರಿ. ದಿಃ 23.03.2018 ರ ವಿಭಾಗ ಪತ್ರದ ರೀತ್ಯಾ ದಾವ ಐಟಂ ನಂ.1 ರಲ್ಲಿ 1 ಎಕರೆ 26 ಗುಂಟೆ ಸ್ವತ್ತು ನನ್ನ ತಾತ ಹೊನ್ನಪ್ಪ ಅವರ ಹಿಸ್ಸೆಗೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವ ಐಟಂ ನಂ.2 ಮತ್ತು 3 ರ ಒಟ್ಟು 1 ಎಕರೆ 21 ಗುಂಟೆ ಸ್ವತ್ತು 2 ಹಾಗೂ 3 ನೇ ಪ್ರತಿವಾದಿಗಳ ಭಾಗಕ್ಕೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ ಹೊನ್ನಪ್ಪ ಅವರ ಹಿಸ್ಸೆಗೆ ಎಂದು ತೋರಿಸಿದ್ದ ದಾವ ಐಟಂ ನಂ.1 ರಲ್ಲಿ 1 ಎಕರೆ 26 ಗುಂಟೆ ಸ್ವತ್ತು ನನ್ನ ತಂದೆ-ತಾಯಿ ಮತ್ತು ನಮ್ಮ ಕುಟುಂಬದ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ.

21. ದಾವ ಐಟಂ ನಂ.2 ಸರ್ವೇ ನಂ. 23/2 ರಲ್ಲಿ 1 ಎಕರೆ 21 ಗುಂಟೆ ಸ್ವತ್ತು ಮಾತ್ರ 2 ಹಾಗೂ 3 ನೇ ಪ್ರತಿವಾದಿಗಳ ಹಿಸ್ಸೆಗೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ಈ 1 ಎಕರೆ 21 ಗುಂಟೆ ಸ್ವತ್ತಿನ ಖಾತೆ ಅವರ ಹೆಸರಿಗೆ ಆದ ನಂತರ ಅದರ ಪೈಕಿ 20 ಗುಂಟೆ ಸ್ವತ್ತನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರಿದ ಪಾಟೀಸವಾಲುಃ** ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.